ಪ್ರತಿ - 1

ಅನುಬಂಧ-1

141

187

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ :- ರೈತ ಮಿತ್ರ ಯೋಜನೆ – ಹೋಬಳಿ ಮಟ್ಟದಲ್ಲಿ ರೈತ ಸಂಪರ್ಕ ಕೇಂದ್ರಗಳ ಸ್ಥಾಪನೆ ಬಗ್ಗೆ.

: : :

ಓದಲಾಗಿದೆ :- 1) ಕೃಷಿ ಆಯುಕ್ತರವರ ಪತ್ರದ ಸಂಖ್ಯೆ: ಕೃವಿವಿ 203 ಕೃತಕೇ 99–2000 ದಿನಾಂಕ: 6–4–2000

2) ಕೃಷಿ ಆಯುಕ್ತರವರ ಅರೆ ಸರ್ಕಾರಿ ಪತ್ರದ ಸಂಖ್ಯೆ: ಕೃವಿವಿ 202 ಕೃತಕೇ: 99–2000, ದಿನಾಂಕ: 10–5–2000

513
6/7/2000

ಪ್ರಸ್ತಾವನೆ:

2000–2001 ನೇ ಸಾಲಿನ ರಾಜ್ಯ ಸರ್ಕಾರದ ಆಯವ್ಯಯ ಪತ್ರದಲ್ಲಿ ಪ್ರಸ್ತಾವಿಸಿರುವ ಹೊಸ ಯೋಜನೆಗಳ ಪೈಕಿ, ರಾಜ್ಯದ ಎಲ್ಲಾ 745 ಕಂದಾಯ ಹೋಬಳಿಗಳಲ್ಲಿ ಪ್ರತಿಯೊಂದು ಹೋಬಳಿಗೆ ಒಂದರಂತೆ "ರೈತ ಮಿತ್ರ" ಎಂಬ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸುವುದೂ ಸಹ ಒಂದಾಗಿರುತ್ತದೆ. ರಾಜ್ಯದ ರೈತಾಪಿ ವರ್ಗಕ್ಕೆ ಆಧುನಿಕ ಸುಧಾರಿತ ತಂತ್ರಜ್ಞಾನವನ್ನು ವ್ಯವಸ್ಥಿತವಾಗಿ ಹಾಗೂ ಸುಲಭವಾಗಿ ದೊರಕುವಂತೆ ಮಾಡುವುದೇ ಈ ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.

ಅದರಂತೆ ಕೃಷಿ ಆಯುಕ್ತರು, ಬೆಂಗಳೂರು ಇವರು ಮೇಲೆ (1) ರಲ್ಲಿ ಓದಲಾಗಿರುವ ಪತ್ರದ ಮುಖೇನ ಸರ್ಕಾರಕ್ಕೆ ಪ್ರಸ್ತಾವನೆಯೊಂದನ್ನು ಸಲ್ಲಿಸುತ್ತಾ, ರಾಜ್ಯದ ಎಲ್ಲಾ 745 ಕಂದಾಯ ಹೋಬಳಿಗಳಲ್ಲಿ ಪ್ರತಿಯೊಂದು ಹೋಬಳಿಗೆ ಒಂದರಂತೆ "ರೈತ ಮಿತ್ರ" ಎಂಬ ರೈತ ಸಂಪರ್ಕ ಕೇಂದ್ರಗಳನ್ನು ಸ್ಥಾಪಿಸಲು ಮಂಜೂರಾತಿ ಕೋರಿರುವುದರ ಜೊತೆಗೆ, ಇಂತಹ ಕೇಂದ್ರಗಳನ್ನು ಸಜ್ಜುಗೊಳಿಸಲು ಪ್ರತಿಯೊಂದು ಕೇಂದ್ರಕ್ಕೆ ರೂ.1.49 ಲಕ್ಷ ರೂಗಳಂತೆ ಒಟ್ಟು 1109.23 ಲಕ್ಷ ರೂ ಗಳ ಅವಶ್ಯಕತೆ ಇದೆಯೆಂದು ತಿಳಿಸುತ್ತಾ, ಈ ಪ್ರಸ್ತಾವನೆಗೆ ಸರ್ಕಾರದ ಮಂಜೂರಾತಿಯನ್ನು ಕೋರಿರುತ್ತಾರೆ.

ಈ ಮಧ್ಯೆ, ಕೃಷಿ ಆಯುಕ್ತರವರು ಉಲ್ಲೇಖ (2) ರಲ್ಲಿ ಓದಲಾಗಿರುವ ಅರೆ ಸರ್ಕಾರಿ ಪತ್ರದ ಮೂಲಕ ದಿನಾಂಕ: 8–5–2000 ರಂದು ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ನಡೆದ 2000–2001ನೇ ಸಾಲಿನಲ್ಲಿ ಯೋಜಿಸಲಾಗಿರುವ ಹೊಸ ಯೋಜನೆಗಳ ಪರಿಶೀಲನಾ ಸಭೆಯಲ್ಲಿ ಉದ್ದೇಶಿತ 745 ರೈತ ಸಂಪರ್ಕ ಕೇಂದ್ರಗಳಿಗೆ ಬದಲಾಗಿ ಸಧ್ಯಕ್ಕೆ ರಾಜ್ಯದ ಒಂದೊಂದು ಪ್ರತಿ ತಾಲ್ಲೂಕಿನಲ್ಲಿ ಒಂದರಂತೆ ಹಾಗೂ ರಾಜ್ಯದ ಹಿಂದುಳಿದ ಪ್ರದೇಶವಾಗಿ ಹೈದ್ರಾಬಾದ ಕರ್ನಾಟಕದ ಜಿಲ್ಲೆಗಳಾದ ಗುಲಬರ್ಗಾದಲ್ಲಿ 6, ಬಳ್ಳಾರಿ, ಕೊಪ್ಪಳ, ಬೀದರ ಹಾಗೂ ರಾಯಚೂರು ತಲಾ 5 ಹೆಚ್ಚುವರಿ ಕೇಂದ್ರಗಳನ್ನು ಅಂದರೆ ಒಟ್ಟು 201 ರೈತ ಮಿತ್ರ ಕೇಂದ್ರಗಳನ್ನು ತಕ್ಷಣ ಸ್ಥಾಪಿಸಬೇಕೆಂದು ನಿರ್ಣಯಿಸಿರುವುದರಿಂದ ಈ 201 ಕೇಂದ್ರಗಳನ್ನು ಸ್ಥಾಪಿಸಲು ಪ್ರತಿಯೊಂದು ಕೇಂದ್ರಕ್ಕೆ 1.49 ಲಕ್ಷ ರೂ ಗಳಂತೆ ಒಟ್ಟು 299.49 ಲಕ್ಷ ರೂಗಳ ಅವಶ್ಯಕತೆ ಇದೆಯೆಂದು ತಿಳಿಸುತ್ತಾ, ಈ ಕೇಂದ್ರಗಳ ಸ್ಥಾಪನೆ ಸಲುವಾಗಿಯೇ ಇಲಾಖೆಯ "2401–00–109–0–21 (ಯೋಜನೆ)" ಲೆಕ್ಕ ಶೀರ್ಷಿಕೆಯಡಿ 2000–2001 ನೇ ಸಾಲಿಗಾಗಿ ಮೀಸಲಾಗಿಡಲಾಗಿರುವ 5.00 ಲಕ್ಷ ರೂ.ಗಳನ್ನು ಹೊರತುಪಡಿಸಿ ಈ 201 ಕೇಂದ್ರಗಳ ಸ್ಥಾಪನೆಗೆ ಅವಶ್ಯವಿರುವ 294.49 ಲಕ್ಷ ರೂ ಗಳನ್ನು ಹೆಚ್ಚುವರಿ ಅನುದಾನದ ರೂಪದಲ್ಲಿ ಒದಗಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

1055
3/7/2000 JDAFT 4/7

......2)

671
5/7

ಕೃಷಿ ಆಯುಕ್ತರ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ರಾಜ್ಯದ ರೈತರಿಗೆ ಸುಧಾರಿತ ಕೃಷಿ ತಂತ್ರಜ್ಞಾನವು ಸುಲಭವಾಗಿ ಹಾಗೂ ನಿರಂತರವಾಗಿ ದೊರಕುವಂತೆ ಮಾಡುವ ಮೂಲಕ ರಾಜ್ಯದ ಒಟ್ಟಾರೆ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವಂತೆ ಮಾಡುವ ಸಲುವಾಗಿ 2000-2001 ನೇ ಸಾಲಿನಲ್ಲಿ ಪ್ರತಿಯೊಂದು ತಾಲ್ಲೂಕಿಗೆ ಒಂದರಂತೆ ಒಟ್ಟು 175 ಹಾಗೂ ರಾಜ್ಯದ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಾದ ಗುಲ್ಬರ್ಗಾದಲ್ಲಿ ಹೆಚ್ಚುವರಿಯಾಗಿ --6 ಹಾಗೂ ಬಳ್ಳಾರಿ, ಕೊಪ್ಪಳ, ಬೀದರ ಹಾಗೂ ರಾಯಚೂರು ಜಿಲ್ಲೆಗಳಲ್ಲಿ ತಲಾ 5 ರಂತೆ ಒಟ್ಟು 201 "ರೈತ ಮಿತ್ರ" ಎಂಬ ರೈತ ಸಂಪರ್ಕ ಕೇಂದ್ರಗಳನ್ನು ಕೆಳಕಂಡ ಸಿಬ್ಬಂದಿಯನ್ನೊಳಗೊಂಡಂತೆ ಸ್ಥಾಪಿಸಲು ಸರ್ಕಾರದ ಮಂಜೂರಾತಿ ನೀಡಲು ನಿರ್ಧರಿಸಿದೆಯಲ್ಲದೆ ಇಂತಹ ಪ್ರತಿಯೊಂದು ಕೇಂದ್ರಗಳನ್ನು ವ್ಯವಸ್ಥಿತವಾಗಿ ಸಜ್ಜುಗೊಳಿಸುವ ಸಲುವಾಗಿ ಪ್ರತಿಯೊಂದು ಕೇಂದ್ರಕ್ಕೆ 1.49 ಲಕ್ಷ ರೂಗಳಂತೆ ಒಟ್ಟು 299.49 ಲಕ್ಷ ರೂ ಗಳಿಗೆ ಮಂಜೂರಾತಿ ನೀಡಲೂ ಸಹ ನಿರ್ಧರಿಸಿದೆ.

ಪ್ರತಿಯೊಂದು ಕೇಂದ್ರದ ಸಿಬ್ಬಂದಿ ವಿವರ

| ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ ಬೆಂಗಳೂರು ನಗರ, ಚಿಕ್ಕಮಗಳೂರು ಈ 6 ಜಿಲ್ಲೆಗಳ ಪ್ರತಿಯೊಂದು ಹೋಬಳಿಗಳಲ್ಲಿ (ಒಟ್ಟು 129 ಹೋಬಳಿ) | | ಉಳಿದ 21 ಜಿಲ್ಲೆಗಳ ಪ್ರತಿಯೊಂದು ಹೋಬಳಿಗಳಲ್ಲಿ (ಒಟ್ಟು 619 ಹೋಬಳಿ) | |
|---|---|---|---|
| 1) ಸಹಾಯಕ ಕೃಷಿ ಅಧಿಕಾರಿ | – 2 | 1) ಸಹಾಯಕ ಕೃಷಿ ಅಧಿಕಾರಿ | – 2 |
| 2) ಕೃಷಿ ಸಹಾಯಕ | – 4 | 2) ಕೃಷಿ ಸಹಾಯಕ | – 5 |
| ಒಟ್ಟು | 6 | ಒಟ್ಟು: | 7 |

ಮೇಲ್ಕಂಡ ನಿರ್ಧಾರದಂತೆ ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಕೃತೋಇ 239 ಕೃಯೋಕಾ 99, ಬೆಂಗಳೂರು, ದಿನಾಂಕ: 29-06-2000**

"ರೈತ ಮಿತ್ರ" ಯೋಜನೆಯಡಿ 2000-2001ನೇ ಸಾಲಿನಲ್ಲಿ ರಾಜ್ಯದ ಪ್ರತಿಯೊಂದು ತಾಲ್ಲೂಕಿಗೆ ಒಂದರಂತೆ ಹಾಗೂ ಹೈದ್ರಾಬಾದ್, ಕರ್ನಾಟಕದ ಜಿಲ್ಲೆಗಳಾದ ಗುಲ್ಬರ್ಗಾದಲ್ಲಿ ಹೆಚ್ಚುವರಿಯಾಗಿ 6 ಹಾಗೂ ಬೀದರ, ರಾಯಚೂರು, ಬಳ್ಳಾರಿ ಹಾಗೂ ಕೊಪ್ಪಳ ಜಿಲ್ಲೆಗಳಲ್ಲಿ ತಲಾ 5 ರಂತೆ ಒಟ್ಟು 201 ( 175 + 6 + 20 ) ಇನ್ನೂರ ಒಂದು ರೈತ ಸಂಪರ್ಕ ಕೇಂದ್ರಗಳನ್ನು ಪ್ರತಿಯೊಂದು ಕೇಂದ್ರ ಒಂದಕ್ಕೆ 1.49 ಲಕ್ಷ ರೂ ಗಳಂತೆ ಒಟ್ಟು 299.49 ಲಕ್ಷ ರೂಗಳ ವೆಚ್ಚದಲ್ಲಿ (ಇನ್ನೂರು ತೊಂಬತ್ತೊಂಬತ್ತು ಲಕ್ಷದ ನಲವತ್ತು ಒಂಬತ್ತು ಸಾವಿರ ರೂಗಳು ಮಾತ್ರ) ಹಾಗೂ ಇಂತಹ ಪ್ರತಿಯೊಂದು ಕೇಂದ್ರಕ್ಕೆ ಕೆಳಕಂಡ ಸಿಬ್ಬಂದಿಯನ್ನೊಳಗೊಂಡಂತೆ ಮತ್ತು ಯಾವುದೇ ಹೊಸ ಹುದ್ದೆಗಳ ಸೃಜನೆ, ಹುದ್ದೆಗಳನ್ನು ಮೇಲ್ದರ್ಜೆ ಸೇರಿಸುವುದು ಇವುಗಳಾವುವೂ ಇಲ್ಲದಂತೆ ಇಲಾಖೆಯಲ್ಲಿ ಹಾಲಿ ಇರುವ ಸಿಬ್ಬಂದಿ ವರ್ಗದವರನ್ನು ಮರು ವಿನ್ಯಾಸಗೊಳಿಸುವ ಷರತ್ತಿನೊಡನೆ ಸ್ಥಾಪಿಸಲು ಈ ಮೂಲಕ ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

....3)

## ಪ್ರತಿಯೊಂದು ಕೇಂದ್ರದ ಸಿಬ್ಬಂದಿ ವಿವರ

| ದಕ್ಷಿಣ ಕನ್ನಡ, ಉಡುಪಿ, ಕೊಡಗು, ಉತ್ತರ ಕನ್ನಡ, ಬೆಂಗಳೂರು ನಗರ, ಚಿಕ್ಕಮಗಳೂರು ಈ ಆರು ಜಿಲ್ಲೆಗಳ ಪ್ರತಿಯೊಂದು ಹೋಬಳಿಗಳಲ್ಲಿ (ಒಟ್ಟು 12[illegible] ಹೋಬಳಿ) | | ಉಳಿದ 21 ಜಿಲ್ಲೆಗಳ ಪ್ರತಿಯೊಂದು ಹೋಬಳಿಗಳಲ್ಲಿ (ಒಟ್ಟು [illegible]19 ಹೋಬಳಿಗಳು) | |
|---|---|---|---|
| 1) ಸಹಾಯಕ ಕೃಷಿ ಅಧಿಕಾರಿ | – 2 | 1) ಸಹಾಯಕ ಕೃಷಿ ಅಧಿಕಾರಿ | – 2 |
| 2) ಕೃಷಿ ಸಹಾಯಕ | – 4 | 2) ಕೃಷಿ ಸಹಾಯಕ | – 5 |
| ಒಟ್ಟು | 6 | ಒಟ್ಟು | 7 |

ಈ ರೈತ ಮಿತ್ರ – ರೈತ ಸಂಪರ್ಕ ಕೇಂದ್ರಗಳ ಕಾರ್ಯ ವಿಧಾನ ಇವೇ ಮುಂತಾದ ವಿವರಗಳನ್ನು ಅನುಬಂಧ – 1 ರಲ್ಲಿ ನೀಡಲಾಗಿದೆ.

ಈ ರೈತ ಸಂಪರ್ಕ ಕೇಂದ್ರಗಳಿಗೆ ತಗಲುವ ವೆಚ್ಚವನ್ನು "2401-00-109-0-21" (ಯೋಜನೆ) ಲೆಕ್ಕ ಶೀರ್ಷಿಕೆಯಡಿ 2000–2001 ನೇ ಸಾಲಿಗಾಗಿ ಒದಗಿಸಲಾಗಿರುವ 5.00 ಲಕ್ಷ ರೂ ಗಳ ಜೊತೆಗೆ ಹೆಚ್ಚುವರಿಯಾಗಿ ಬೇಕಾಗಿರುವ 294.49 ಲಕ್ಷ ರೂ ಗಳನ್ನು ಇಲಾಖೆಯ ಯೋಜನಾ ಕಾರ್ಯಕ್ರಮಗಳ ದಿನಾಂಕ:31–3–2001 ರವರೆಗಿನ ಒಟ್ಟಾರೆ ಉಳಿತಾಯವನ್ನು ಮೇಲ್ಕಂಡ ಲೆಕ್ಕ ಶೀರ್ಷಿಕೆಗೆ ಮರು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಭರಿಸತಕ್ಕದ್ದು, ಈ ಕಾರ್ಯಕ್ರಮಕ್ಕೆ ತಗಲುವ ವೆಚ್ಚದ ಪೈಕಿ 95.00 ಲಕ್ಷ ರೂಗಳನ್ನು ಇಲಾಖೆಯ ಉಳಿತಾಯವನ್ನು ಮರು ಹೊಂದಾಣಿಕೆ ಮಾಡಿಕೊಳ್ಳುವ ಮೂಲಕ ಭರಿಸಲು ಇಲಾಖೆಗೆ ಸಾಧ್ಯವಿದ್ದು, ಉಳಿದ 200.00 ಲಕ್ಷ ರೂ ಗಳನ್ನು ಪೂರಕ ಅನುದಾನದ ರೂಪದಲ್ಲಿ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಇಲಾಖೆಯು 2000–2001 ನೇ ಸಾಲಿನ ಯೋಜನಾ ಕಾರ್ಯಕ್ರಮದ ಒಟ್ಟಾರೆ ಅನುದಾನದಲ್ಲಿ ಮೇಲ್ಕಂಡಷ್ಟು ಮೊತ್ತದ ಅನುದಾನವನ್ನು 31–03–2001 ರೊಳಗಾಗಿ ಸರ್ಕಾರಕ್ಕೆ ಅರ್ಪಿಸತಕ್ಕದ್ದು.

ಈ ಆದೇಶವನ್ನು ಯೋಜನೆ ಮತ್ತು ಆರ್ಥಿಕ ಇಲಾಖೆಗಳು ಕ್ರಮವಾಗಿ ಟಿಪ್ಪಣಿ ಸಂಖ್ಯೆ: ಯೋಇ 48 ಪರಅ 2000, ದಿನಾಂಕ:6–6–2000 ಹಾಗೂ ಆಇ 894 ವೆಚ್ಚ–4: 2000 ದಿನಾಂಕ:21–6–2000 ರಲ್ಲಿ ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

H. C. Sumithra

( ಹೆಚ್.ಸಿ. ಸುಮಿತ್ರ )
ಸರ್ಕಾರದ ಅಧೀನ ಕಾರ್ಯದರ್ಶಿ
ಕೃಷಿ ಮತ್ತು ತೋಟಗಾರಿಕೆ ಇಲಾಖೆ

ಗೆ

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು
2) ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿ : ಕಾರ್ಯದರ್ಶಿಗಳು

3) ಕೃಷಿ ಆಯುಕ್ತರು, ಶೇಷಾದ್ರಿ ರಸ್ತೆ, ಬೆಂಗಳೂರು
4) ಎಲ್ಲಾ ವಿಭಾಗಾಧಿಕಾರಿಗಳು, ಮೈಸೂರು, ಬೆಂಗಳೂರು, ಬೆಳಗಾಂ ಗುಲ್ಬರ್ಗಾ ವಿಭಾಗ
5) ಎಲ್ಲಾ ಜಿಲ್ಲಾಧಿಕಾರಿಗಳು
6) ಎಲ್ಲಾ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು
7) ನಿರ್ದೇಶಕರು, ಜಲಾನಯನ ಅಭಿವೃದ್ಧಿ ಇಲಾಖೆ, ಬೆಂಗಳೂರು
8) ಎಲ್ಲಾ ಜಿಲ್ಲಾ ಜಂಟಿ ನಿರ್ದೇಶಕರುಗಳು : ಉಪ ಕೃಷಿ ನಿರ್ದೇಶಕರುಗಳು
9) ಎಲ್ಲಾ ವಿಭಾಗೀಯ ಉಪ ಕೃಷಿ ನಿರ್ದೇಶಕರುಗಳು
10) ಎಲ್ಲಾ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳು
11) ಸರ್ಕಾರದ ಅಧೀನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ವೆಚ್ಚ-4)
12) ನಿರ್ದೇಶಕರು, ಯೋಜನಾ ಪರಿಯೋಜನಾ ವಿಭಾಗ, ಯೋಜನಾ ಇಲಾಖೆ
13) ಆಂತರಿಕ ಆರ್ಥಿಕ ಸಲಹೆಗಾರರು, ಕೃ ತೋ. ಇಲಾಖೆ
14) ಮಾನ್ಯ ಮುಖ್ಯಮಂತ್ರಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
15) ಮಾನ್ಯ ಕೃಷಿ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
16) ಮಾನ್ಯ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು
17) ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಬೆಂಗಳೂರು
18) ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರ ಆಪ್ತ ಕಾರ್ಯದರ್ಶಿ
19) ಶಾಖಾ ರಕ್ಷಕ ಕಡತ : ಹೆಚ್ಚುವರಿ ಪ್ರತಿಗಳು.

( ಕ್ರಮ ಸಂಖ್ಯೆ 8 ಮತ್ತು 9 ಕೃಷಿ ಆಯುಕ್ತರವರ ಕಾರ್ಯಾಲಯದ ಮುಖಾಂತರ )

ಎಂ:

## ಅನುಬಂಧ-1

### ರೈತ ಮಿತ್ರ ಯೋಜನೆ, ರೈತ ಸಂಪರ್ಕ ಕೇಂದ್ರಗಳ ಕಾರ್ಯವಿಧಾನ

1. ರೈತ ಮಿತ್ರ – ರೈತ ಸಂಪರ್ಕ ಕೇಂದ್ರವು ಕೃಷಿ ಇಲಾಖೆಯ ಪ್ರಾಥಮಿಕ ಕಾರ್ಯ ನಿರ್ವಾಹಕ ಘಟಕವಾಗಿ ಕಾರ್ಯನಿರ್ವಹಿಸುವುದರ ಜೊತೆಗೆ ಕ್ಷೇತ್ರಮಟ್ಟದ ಸಮಸ್ಯೆಗಳನ್ನು ಗುರುತಿಸಿ ಅವುಗಳಿಗೆ ಪರಿಹಾರೋಪಾಯ ಮಾರ್ಗಗಳನ್ನು ಸೂಚಿಸುವುದು.
2. ಕೇಂದ್ರ ಸರ್ಕಾರವು ಪ್ರೋತ್ಸಾಹಿಸುತ್ತಿರುವ ಫಾರಂ ಕ್ಲಿನಿಕ್ ಮಾದರಿಯಲ್ಲಿ ಈ ಕೇಂದ್ರಗಳು ಕೃಷಿ ಜೊತೆಗೆ ಕೃಷಿಗೆ ಸಂಬಂಧಿಸಿದ ಉತ್ಪಾದನಾ ಚಟುವಟಿಕೆಗಳಲ್ಲಿ ಮತ್ತು ಪ್ರಮುಖವಾದ ತೋಟಗಾರಿಕೆ ಬೆಳೆಗಳ ಸುಧಾರಿತ ತಂತ್ರಜ್ಞಾನವನ್ನು ರೈತರು ವ್ಯಾಪಕವಾಗಿ ಅಳವಡಿಸಲು ಅವರುಗಳನ್ನು ಪ್ರೇರೇಪಿಸುವುದರ ಜೊತೆಗೆ ಇವುಗಳನ್ನು ಅಳವಡಿಸಲು ಬೇಕಾಗುವ ಸಲಹೆಗಳನ್ನು ಪ್ರಯೋಗ ಪ್ರಾತ್ಯಕ್ಷಿಕೆ ಇವುಗಳ ಮೂಲಕ ಮನವರಿಕೆ ಮಾಡಿಕೊಡತಕ್ಕದ್ದು.
3. ರೈತರು, ಯುವ ರೈತ ಹಾಗೂ ರೈತ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ಮಾಹಿತಿ ಒದಗಿಸುವುದು ಈ ದಿಸೆಯಲ್ಲಿ ರೈತ ಸಂಪರ್ಕ ಕೇಂದ್ರಗಳು ಚರ್ಚಾ ಕೇಂದ್ರಗಳಾಗಿ ಕಾರ್ಯನಿರ್ವಹಿಸತಕ್ಕದ್ದು.
4. ಸ್ಥಳೀಯ ಕೃಷಿ ಪರಿಕರಗಳಾದ ಬೀಜ ರಸಗೊಬ್ಬರ, ಕೀಟನಾಶಕ, ಕೃಷಿ ಉಪಕರಣ, ಇವೇ ಮುಂತಾದವುಗಳ ಬೇಡಿಕೆಯನ್ನು ಗುರುತಿಸುವ ಮೂಲಕ ಸೂಕ್ತ ಸಮಯದಲ್ಲಿ ಇವುಗಳನ್ನು ರೈತರಿಗೆ ಲಭ್ಯವಾಗಲು ಅಗತ್ಯ ಕ್ರಮ ತೆಗೆದುಕೊಳ್ಳತಕ್ಕದ್ದು.
5. ಕೃಷಿ ಪದವಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ತರಬೇತಿಯನ್ನು ನೀಡತಕ್ಕದ್ದು.
6. ರೈತ ಸೇವಾ ಕೇಂದ್ರದ ವಿಸ್ತರಣಾ ಕಾರ್ಯಕರ್ತರುಗಳು: ಕೇಂದ್ರದಲ್ಲಿಯೇ ರೈತರ ಸಮಸ್ಯೆಗಳಿಗೆ ಪರಿಹಾರ ನೀಡುವುದರ ಜೊತೆಗೆ ಆಗ್ಗಿಂದಾಗ್ಗೆ ರೈತರ ಹಿಡುವಳಿಗಳಿಗೆ ಭೇಟಿ ನೀಡುವ ಮೂಲಕ ರೈತರಿಗೆ ಆಧುನಿಕ ತಂತ್ರಜ್ಞಾನವನ್ನು ತಿಳಿಸುವ ಮೂಲಕ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅಗತ್ಯವಿರುವ ಸಲಹೆ ಸೂಚನೆಗಳನ್ನು ನೀಡತಕ್ಕದ್ದು.
7. ವಿವಿಧ ಕೃಷಿ ಅಭಿವೃದ್ಧಿ:ಉತ್ಪಾದನಾ ಯೋಜನೆ ಹಾಗೂ ಒತ್ತು ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಈ ಕೇಂದ್ರಗಳುಪ್ರಮುಖ ಪಾತ್ರವಹಿಸತಕ್ಕದ್ದು.
8. ವಿವಿಧ ಯೋಜನೆಯಲ್ಲಿನ ಪ್ರಯೋಜನಗಳನ್ನು ವಿತರಿಸುವಲ್ಲಿ ಅರ್ಹ ಫಲಾನುಭವಿಗಳನ್ನು ಗುರುತಿಸಿ ಈ ಪ್ರಯೋಜನಗಳನ್ನು ಬಳಸಿ ಕೃಷಿ ಉತ್ಪಾದನೆಯನ್ನು ಹೆಚ್ಚಿಸಲು ಅವರುಗಳಿಗೆ ಸೂಕ್ತ ತಿಳುವಳಿಕೆ ನೀಡತಕ್ಕದ್ದು.
9. ಸುಧಾರಿತ ಕೃಷಿ ಪರಿಕರ ಉಪಕರಣ ಹಾಗೂ ಯಂತ್ರೋಪಕರಣಗಳ ಬಳಕೆ ಬಗ್ಗೆ ರೈತರಿಗೆ ಅಗತ್ಯ ಮಾಹಿತಿ ಒದಗಿಸತಕ್ಕದ್ದು.
10. ವಿವಿಧ ಯೋಜನೆಯಡಿ ಏರ್ಪಡಿಸಲಾಗುವ ಕ್ಷೇತ್ರ ದರ್ಶನ ಹಾಗೂ ಪ್ರಾತ್ಯಕ್ಷಿಕೆಗಳನ್ನು ಅಧಿಕ ಸಂಖ್ಯೆಯ ರೈತರು ಸಂದರ್ಶಿಸುವಂತೆ ಮಾಡುವ ಮೂಲಕ ಇವುಗಳಲ್ಲಿ ಅಳವಡಿಸಲಾಗುವ ತಂತ್ರಜ್ಞಾನವನ್ನು ಎಲ್ಲಾ ರೈತರೂ ತಮ್ಮ ಹಿಡುವಳಿಗಳಲ್ಲಿ ಅಳವಡಿಸುವಂತೆ ಅವರುಗಳನ್ನು ಪ್ರೇರೇಪಿಸುವುದು.

H. C. Sumitra
(ಹೆಚ್.ಸಿ.ಸುಮಿತ್ರ)
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಕೃಷಿ ಮತ್ತು ತೋಟಗಾರಿಕೆ ಇಲಾಖೆ